ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/ PGNEET /2024 | ಕರಡು | Date: 12-03-2025

**ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ – ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ – 2024**
**(ಸೂಚನೆಗಳು ಮತ್ತು ವೇಳಾಪಟ್ಟಿ)**

ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಚುರಪಡಿಸಿರುವ ದಿನಾಂಕ 01-03-2025ರ ಪ್ರಕಟಣೆಯನ್ನು ನೋಡಿ. ಮುಂದುವರಿದು, ಎಮ್‌ಸಿಸಿ ರವರು 2024ನೇ ಸಾಲಿನ ಪಿಜಿ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ವಿಶೇಷ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸಿರುವ ಹಿನ್ನಲೆಯಲ್ಲಿ, ಪ್ರಾಧಿಕಾರವು ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ ಲಭ್ಯವಿರುವ ಪಿಜಿ ವೈದ್ಯಕೀಯ ಕೋರ್ಸ್‌ಗಳ ಹಂಚಿಕೆಗೆ ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಕಟಿಸುತ್ತಿದೆ. ಲಭ್ಯವಿರುವ ಸೀಟುಗಳ ಆಯ್ಕೆಗೆ ಆಸಕ್ತಿ ಇರುವ ಅರ್ಹ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ; ಸೀಟುಗಳ ಲಭ್ಯತೆ / ಖಾಲಿ ಇರುವ ಬಗ್ಗೆ ಮಾಹಿತಿ ಕುರಿತು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ ಅನ್ನು ಪರಿಶೀಲಿಸುತ್ತಿರಲು ಸೂಚಿಸಿದೆ.

**1. ಅರ್ಹತೆ: ಈ ಕೆಳಕಂಡ ಅಭ್ಯರ್ಥಿಗಳು ಮಾತ್ರ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.**

(ಎ) ಪ್ರಾಧಿಕಾರದಿಂದ ಅಥವಾ ಎಮ್‌ಸಿಸಿ ಯಿಂದ ಅಥವಾ ಇತರೆ ರಾಜ್ಯಗಳಲ್ಲಿ, ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ಇಟ್ಟುಕೊಳ್ಳದೇ ಇರುವವರು, ಮತ್ತು

(ಬಿ) ಪ್ರಾಧಿಕಾರದಿಂದ ಅಥವಾ ಎಮ್‌ಸಿಸಿ ಯಿಂದ ಮೂರನೇ ಅಥವಾ **ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಸೀಟು ಹಂಚಿಕೆಯಾಗದಿರುವವರು, (ಪ್ರಿ ಕ್ಲಿನಿಕಲ್ / ಪ್ಯಾರಾ ಕ್ಲಿನಿಕಲ್ ಸೀಟನ್ನು ರದ್ದು ಪಡಿಸಿಕೊಂಡಿರುವವರು ಅಥವಾ** ಸೀಟನ್ನು ಇಟ್ಟುಕೊಳ್ಳದೇ ಇರುವವರು **ಭಾಗವಹಿಸಬಹುದು) ಮತ್ತು**

(ಐ) ಎಮ್‌ಸಿಸಿ ಯಿಂದ ವಿಶೇಷ ಸ್ಟ್ರೇ ವೇಕೆನ್ಸಿ ಸುತ್ತಿನಲ್ಲಿ ಸೀಟು **ಹಂಚಿಕೆಯಾಗದಿರುವವರು, ಮತ್ತು**

(ಒ) ದಿನಾಂಕ 01-03-2025 ರ **ಪ್ರಕಟಣೆಯಂತೆ ಹೊಸದಾಗಿ ನೋಂದಣಿ ಮಾಡಿ, ದಾಖಲೆಗಳನ್ನು ಪರಿಶೀಲಿಸಿಕೊಂಡು ಮೂಲ ದಾಖಲೆಗಳನ್ನು ಸಲ್ಲಿಸಿರುವವರು.**

**2. CAUTION DEPOSIT 13-03-2025 ರಿಂದ 15-03-2025-ಮ4.00 ರ ವರೆಗೆ** (NEFT/RTGS/ ONLINE)

a) ಹಿಂದಿನ ಸುತ್ತಿನ ಸೀಟು ಹಂಚಿಕೆಯಲ್ಲಿ ಈಗಾಗಲೆ CAUTION DEPOSIT ಅನ್ನು ಪಾವತಿಸಿರುವ ಆದರೆ ಯಾವುದೇ ಸೀಟು ಹಂಚಿಕೆಯಾಗದಿರುವ ಅಭ್ಯರ್ಥಿಗಳು ಮತ್ತೊಮ್ಮೆ ಪಾವತಿಸಬೇಕಾಗಿಲ್ಲ.

b) ಇತರೆ ಅಭ್ಯರ್ಥಿಗಳು ಎರಡನೆ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಕಡ್ಡಾಯವಾಗಿ ರೂ. 5,00,000/- ಅನ್ನು (ಐದು ಲಕ್ಷಗಳು ಮಾತ್ರ) ಪಾವತಿಸಬೇಕು. ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ಪಾವತಿಸುವ CAUTION DEPOSIT ಅನ್ನು ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಯಾವುದೇ ಅಭ್ಯರ್ಥಿಯು ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ನಂತರ ಶುಲ್ಕ ಪಾವತಿಸಲು ವಿಫಲನಾದಲ್ಲಿ ಅಭ್ಯರ್ಥಿಯು ಪಾವತಿಸುವ CAUTION DEPOSIT ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು (ನಿಯಮಾನುಸಾರ ಅಭ್ಯರ್ಥಿಯು ದಂಡವನ್ನೂ ಸಹ ಪಾವತಿಸಬೇಕು) ಹಾಗು ಅಂತಹ ಅಭ್ಯರ್ಥಿಗಳನ್ನು ಮುಂದಿನ ವರ್ಷದ ಎಮ್‌ಸಿಸಿ ಕೌನ್ಸಿಲಿಂಗ್ ಸೇರಿದಂತೆ ಪಿಜಿ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಿರ್ಭಂಧಿಸಲಾಗುವುದು. (ಶುಲ್ಕ ಪಾವತಿಸದ ಅಭ್ಯರ್ಥಿಗಳ ಪಟ್ಟಿಯನ್ನು ಎಮ್‌ಸಿಸಿ ಗೆ ಕಳುಹಿಸಲಾಗುವುದು)

.......2

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

3. **ಮೂಲ ದಾಖಲೆಗಳನ್ನು ಕೆಇಎ, ಬೆಂಗಳೂರು ಇಲ್ಲಿ ಸಲ್ಲಿಸುವುದು.**

ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಯಲ್ಲಿ ಭಾಗವಹಿಸಲು ಅಭ್ಯರ್ಥಿಗಳು ಪ್ರಾಧಿಕಾರದಲ್ಲಿ ಮೂಲ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಈಗಾಗಲೇ ದಾಖಲೆಗಳನ್ನು ಪರಿಶೀಲಿಸಿಕೊಂಡು, ವೆರಿಫಿಕೇಶನ್ ಸ್ಲಿಪ್ ಹೊಂದಿರುವ ಅರ್ಹ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ದಿನಾಂಕ 14-03-2025 ರಂದು (ಬೆ.11.00 ರಿಂದ ಮ. 1.00 ರವರೆಗೆ) ಮೂಲ ದಾಖಲೆಗಳನ್ನು ಕೆಇಎ, ಬೆಂಗಳೂರು ಇಲ್ಲಿ ಸಲ್ಲಿಸಬಹುದಾಗಿದೆ.

4. **ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. 13-03-2025 ಮ.4.00 ರಿಂದ 16-03-2025 ಬೆ. 10.00 ರ ವರೆಗೆ**
   - (ಎ) ಅರ್ಹ ಅಭ್ಯರ್ಥಿಗಳು ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬೇಕು. ಹಿಂದಿನ ಸುತ್ತುಗಳಲ್ಲಿ ದಾಖಲಿಸಿದ್ದ ಇಚ್ಛೆಗಳನ್ನು ಪರಿಗಣಿಸುವುದಿಲ್ಲ.
   - (ಬಿ) ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಮೊದಲು ಶುಲ್ಕದ ವಿನ್ಯಾಸವನ್ನು ತಪ್ಪದೇ ಪರಿಶೀಲಿಸಿ.
   - (ಐ) ಒಂದು ವೇಳೆ ಪ್ರವೇಶ ಪಡೆಯಲು ವಿಫಲರಾದಲ್ಲಿ ಅಥವಾ ರದ್ದತಿ ಕುರಿತು ನಿಯಮಾನುಸಾರ ಪಾವತಿಸಿಬೇಕಾದ ದಂಡಗಳನ್ನು ಗಮನದಲ್ಲಿಟ್ಟುಕೊಂಡು ಸೇರ ಬಯಸುವ ಇಚ್ಛೆಗಳನ್ನು ಮಾತ್ರ ದಾಖಲಿಸಲು ಸೂಚಿಸಲಾಗಿದೆ.

ಗಮನಿಸಿ: **CAUTION DEPOSIT** ಮತ್ತು ಆಪ್ಷನ್ ಗಳ ದೃಢೀಕರಣದ ನಂತರ ಅಭ್ಯರ್ಥಿಗಳನ್ನು ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ.

**NOTE:** Candidate will be barred from participating in the counselling including AIQ in the coming year in case if he / she wish to cancel the seat allotted in Stray Vacancy Round.

Any cancellation or surrender of seats after the mop up round shall be made in person only to the Director, Directorate of Medical Education, Karnataka with a penalty of Rs 18,00,000/- (Rupees eighteen lakhs only) in case of Medical Clinical Degree or Diploma Courses.

Provided that,-

(a) A candidate who has opted Pre-Clinical seats like Anatomy, Physiology and Biochemistry including Forensic Medicine in the event of cancellation shall pay a penalty of Rs. 1,00,000 (Rupees One Lakh only) and the fees paid shall be forfeited;

(b) A candidate who has opted Para Clinical Seats like Pharmacology, Pathology, Microbiology and Community Medicine, in the event of cancellation, shall pay a penalty of Rs. 2,00,000/-(Rupees Two lakhs only) for post graduate degree courses and Rs. 75,000/- (Rupees Seventy thousand only) for post graduate Diploma courses and the tuition fees paid shall be forfeited.

In addition to the prescribed penalty under sub-rule (4), all candidates (including in-service candidates) shall pay the entire course fee and stipend to the respective Medical/Dental colleges in the event he leaving the course before its completion.

.......3

**ಎರಡನೇ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ವೇಳಾಪಟ್ಟಿ – ಪಿಜಿ ನೀಟ್ 2024**

| | | |
|---|---|---|
| 1 | ಪರಿಶೀಲನೆ ಹಾಗು ಮೂಲ ದಾಖಲೆಗಳನ್ನು ಸಲ್ಲಿಸಿದ ನಂತರ **CAUTION DEPOSIT** Rs.5,00,000/- ಅನ್ನು ಪಾವತಿಸುವುದು. | From 13-03-2025 up to 4.00 pm on 15-03-2025. |
| 2 | ಮೂಲ ದಾಖಲೆಗಳನ್ನು ಕೆಇಎ, ಬೆಂಗಳೂರು ಇಲ್ಲಿ ಸಲ್ಲಿಸುವುದು. | 14-03-2025 (11.00 am to 1.00 pm) |
| 3 | ಹೊಸ ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು | From 4.00 pm on 13-03-2025 to 16-03-2025 – 10.00 am |
| 4 | ತಾತ್ಕಾಲಿಕ ಸೀಟು ಹಂಚಿಕೆ ಫಲಿತಾಂಶ | 16-03-2025 – after 2.00 pm |
| 5 | ಅಂತಿಮ ಸೀಟು ಹಂಚಿಕೆ ಫಲಿತಾಂಶ | 17-03-2025 – after 11.00 am |
| 6 | **CAUTION DEPOSIT** ಅನ್ನು ಕಳೆದು ಉಳಿದ ಶುಲ್ಕ ಪಾವತಿ: | 17-03-2025 to 19-03-2025 – 2.00 pm |
| 7 | ಪ್ರವೇಶ ಆದೇಶಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು | Up to 19-03-2025 – 4.00 pm |
| 8 | ಕಾಲೇಜಿನಲ್ಲಿ ಪ್ರವೇಶ ಪಡೆಯುವುದಕ್ಕೆ ಕೊನೆಯ ದಿನಾಂಕ: | 19-03-2025 – 5.30 pm (Date will not extended further – as per MCC) |

**(ವೇಳಾಪಟ್ಟಿಯು ಬದಲಾವಣೆಗೆ ಒಳಪಟ್ಟಿರುತ್ತದೆ, ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿಗೆ ಭೇಟಿ ನೀಡುತ್ತಿರುಲು ಸೂಚಿಸಿದೆ)**

ಕಾರ್ಯನಿರ್ವಾಹಕ ನಿರ್ದೇಶಕರು